ಪೂರ್ವಗ್ರಹ ವಿಚಾರ ನನ್ನ ತಲೆಯ ಒಂದು ಮೂಲೆಯಲ್ಲಿ ಎಲ್ಲಿಂದಲೋ ಬಂದು ಸೇರಿಕೊಂಡಿತ್ತು. ಪು.ತಿ.ನ. ತೆರೆದ ಮನಸ್ಸಿನಿಂದ ಹೇಳಿದ ಆ ಮಾತು, ನನ್ನ ತಲೆಯಲ್ಲಿದ್ದ ಪೂರ್ವಗ್ರಹದ ಪೀಡೆಯನ್ನು ತೊಲಗಿಸಿತು. ದೊಡ್ಡಮನುಷ್ಯರು ಯಾವಾಗಲೂ ದೊಡ್ಡಮನುಷ್ಯರೆ ಮತ್ತು ಅವರು ದೊಡ್ಡ ಮನಸ್ಸಿನವರು ಎನ್ನಿಸಿತು. ಕೆಲವೊಮ್ಮೆ ವಾಸ್ತವ, ನಮ್ಮ ಕಲ್ಪನೆಗಿಂತ ಅಥವಾ ನಮ್ಮ ನಂಬಿಕೆಗಿಂತ ಬೇರೆಯೇ ಆಗಿರುತ್ತದೆ ಎಂದುಕೊಂಡೆ.

★★★

1990ರ ದಶಕದಲ್ಲಿ ನಾನು ಬೆಂಗಳೂರಿನ ಪ್ರಕಾಶನ ಸಂಸ್ಥೆಯೊಂದರಲ್ಲಿ ಕೆಲಸಕ್ಕೆ ಸೇರಿದೆ. ನನ್ನ ಕ್ಯಾಮರಾಕ್ಕೆ ಹೊಸ ಮತ್ತು ಹಳೆಯ ಮುಖಗಳನ್ನು ನೋಡುವ ಅವಕಾಶ ಸಿಕ್ಕಿತು.

1992ರ ಡಿಸೆಂಬರ್ ತಿಂಗಳು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಕೆಡವಿದ ಪ್ರಕರಣ ನಡೆಯಿತು. ದೇಶದ ಎಲ್ಲ ಕಡೆಗಳಂತೆ ಬೆಂಗಳೂರಿನಲ್ಲಿ ಆ ಕೃತ್ಯದ ವಿರುದ್ಧ ಪ್ರತಿಭಟನೆಗಳು ನಡೆದವು. ಬೆಂಗಳೂರಿನಲ್ಲಿ ಪ್ರಗತಿಪರರು ಮತ್ತು ಸಾಹಿತಿಗಳು ಪ್ರತಿಭಟನಾ ಜಾಥಾ ನಡೆಸಿದರು. ಪು.ತಿ.ನ. ಆ ಜಾಥಾವನ್ನುದ್ದೇಶಿಸಿ ಮಾತನಾಡಿದರು. ಅವರ ಫೋಟೊ ತೆಗೆದ ನಾನು ಆ ಗದ್ದಲದಲ್ಲಿ ಅವರೊಂದಿಗೆ ನನ್ನ ಪರಿಚಯ ಹೇಳಿಕೊಳ್ಳಲು ಹೋಗಲಿಲ್ಲ. ವೃದ್ಧಾಪ್ಯದ ಕಾರಣ ಒಂದಿಷ್ಟು ತೆಳ್ಳಗಾಗಿದ್ದಾರೆ ಎನ್ನಿಸಿತು. ಅವರ ಉತ್ಸಾಹ ಮೆಚ್ಚುವಂತಿತ್ತು.

ಪು.ತಿ.ನ. ಸಮಗ್ರ ಕವನಗಳ ಕೃತಿಗೆ ಅವರು ಬರೆದಿರುವ ಮುನ್ನುಡಿಗೆ 'ಮೆಲುಕು' ಎಂದು ಕರೆದಿದ್ದಾರೆ.

ನನ್ನ ಕ್ಯಾಮರಾ ಸಹವಾಸದಿಂದ ನಾನು ಕಂಡ ಇಂಥ ಹಲವು ನೆನಪುಗಳನ್ನು ಮೆಲುಕುಹಾಕುವ ಹವ್ಯಾಸ ಮನಸ್ಸಿಗೆ ಮುದ ನೀಡುವಂಥದ್ದು.

## ಪರಂಜ್ಯೋತಿ

ಪರಂಜ್ಯೋತಿ, ನೀಲಾಂಬರಿ ಎಂಬ ಕಾವ್ಯನಾಮಗಳಲ್ಲಿ ಪತ್ರಿಕೆಗಳಿಗೆ ಬರೆಯುತ್ತ ಬಂದವರು ಕೆ.ಪಿ. ಸ್ವಾಮಿ. ಅವರ ಕಾದಂಬರಿ, ಕತೆ, ಪ್ರಬಂಧ, ಪ್ರವಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆಗಳಿಗೆ ಸೇರಿದಂತೆ 30 ಪುಸ್ತಕಗಳು ಪ್ರಕಟವಾಗಿವೆ. ಹುಟ್ಟಿದ್ದು ನೀಲಗಿರಿಯಲ್ಲಿ, ಓದಿದ್ದು ಮಂಡ್ಯದಲ್ಲಿ. ಚಹಾ ಎಸ್ಟೇಟ್‌ನಲ್ಲಿ ಮೇಸ್ತ್ರಿಯಾಗಿ ವೃತ್ತಿ ಆರಂಭಿಸಿದ ಅವರು ಅಪ್ಪರ್ ಭವಾನಿ ಅಣೆಕಟ್ಟೆ ಯೋಜನೆಯಲ್ಲಿ, ಪುತ್ತೂರಿನಿಂದ ಪ್ರಕಟವಾಗುತ್ತಿದ್ದ 'ಇಂದ್ರಧನುಸ್' ಮಾಸಪತ್ರಿಕೆ, ಬೆಂಗಳೂರಿನಿಂದ ಹೊರಡುತ್ತಿದ್ದ 'ಪ್ರಪಂಚ' ವಾರಪತ್ರಿಕೆಗಳಲ್ಲಿ ಪತ್ರಕರ್ತರಾಗಿ ಕೆಲಸ ಮಾಡಿದ್ದಾರೆ. ಚೆನ್ನೈನ ಸೋವಿಯತ್ ಸಮಾಚಾರ ಇಲಾಖೆಯಲ್ಲಿ ಗುಮಾಸ್ತರಾಗಿ, ಅನುವಾದಕರಾಗಿ 25 ವರ್ಷ ಕೆಲಸ ಮಾಡಿ, ಬಳಿಕ ನವಕರ್ನಾಟಕ ಪ್ರಕಾಶನದಲ್ಲಿ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ತಮಿಳು, ಮಲಯಾಳಂ, ಹಿಂದಿ ಭಾಷೆಗಳಿಗೆ ಅವರ ಕತೆಗಳು ಅನುವಾದಗೊಂಡಿವೆ. ಮಕ್ಕಳ ಪುಸ್ತಕಗಳು ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿವೆ. 'ನೀಲಗಿರಿ: ಸಾಮಾಜಿಕ, ಸಾಂಸ್ಕೃತಿಕ ಕಣ್ಣೋಟ' ಅವರ ಇತ್ತೀಚಿನ ಕೃತಿ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.